

ಮುಟ್ಟಿಸುತ್ತಿವೆಯಾದರೂ ವಿಸ್ತೃತ ಮಾಹಿತಿ ಕೊರತೆ ಎದ್ದುಕಾಣುತ್ತದೆ. ಸರ್ಕಾರಗಳು ಅಥವಾ ಎನ್‌ಜಿಒಗಳು ಕೃಷಿ ತಂತ್ರಜ್ಞಾನದ ಬಗ್ಗೆ ಅರಿವನ್ನು ಮೂಡಿಸಬೇಕಿದೆ. ಆಧುನಿಕ ಕೃಷಿಗಿದು ಸಕಾಲವಾಗಿದ್ದು, ತಂತ್ರಜ್ಞಾನ ಆಧರಿತ ಬೇಸಾಯಕ್ಕೆ ಆದ್ಯತೆ ನೀಡುವುದು ಇಂದಿನ ಅತ್ಯಗತ್ಯಗಳಲ್ಲೊಂದು.

ಹವಾಮಾನ ವೈಪರೀತ್ಯ, ವಿದ್ಯುತ್ ಸಮಸ್ಯೆ, ನೀರಾವರಿ ಕೊರತೆ, ರೋಗ ಬಾಧೆ ಹಾಗೂ ಮಾರುಕಟ್ಟೆಯ ಅಸ್ಥಿರತೆ ಇವೆಲ್ಲವೂ ಕೃಷಿ ಮೇಲಿನ ನಮ್ಮ ಸ್ಥಿರತೆಯನ್ನು ಕುಗ್ಗಿಸುವ ಸಮಸ್ಯೆಗಳು. ಇವುಗಳ ನಡುವೆ ದಲ್ಲಾಳಿಗಳ ಕಮಿಷನ್ ಕಾಟ ಬೇರೆ. ರೈತರು ಎದುರಿಸುತ್ತಿರುವ ಈ ಸಮಸ್ಯೆಗಳಿಗೆ ವ್ಯವಸ್ಥಿತ ಪರಿಹಾರವನ್ನು ಕೃಷಿ ತಂತ್ರಜ್ಞಾನ ಕಲ್ಪಿಸಬಹುದು ಎಂಬುದು ನನ್ನ ಅಭಿಪ್ರಾಯ.

ದೇಶದ ಎಲ್ಲ ರೈತರನ್ನು ಕಡ್ಡಾಯವಾಗಿ ಆನ್‌ಲೈನ್ ಪ್ಲಾಟ್‌ಫಾರ್ಮ್ ಅಡಿ ತರಬೇಕು. ಯಾವ ಬೆಳೆಯನ್ನು ಎಷ್ಟು ವಿಸ್ತೀರ್ಣದ ಜಮೀನಿನಲ್ಲಿ ರೈತರು ಬೆಳೆಯುತ್ತಿದ್ದಾರೆ, ಬೆಳೆಯ ಬೆಳವಣಿಗೆ ಹೇಗಿದೆ, ಇಳುವರಿ ಯಾವ ಪ್ರಮಾಣದಲ್ಲಿ ಲಭ್ಯವಾಗಬಹುದು ಎಂಬಿತ್ಯಾದಿ ಮಾಹಿತಿಯನ್ನು ಕಾಲಕಾಲಕ್ಕೆ ಪ್ಲಾಟ್‌ಫಾರ್ಮ್‌ನಲ್ಲಿ ನಮೂದಿಸಬೇಕು. ಕೃಷಿ ಮಾರುಕಟ್ಟೆಯ ಬೇಡಿಕೆ ಸ್ಥಿತಿಗತಿ ಏನು ಮತ್ತು ಬೆಲೆ ಎಷ್ಟಿದೆ ಎಂಬುದು ನಿತ್ಯವೂ ಆ ವೇದಿಕೆಯಲ್ಲಿ ಅಪ್‌ಡೇಟ್ ಆಗುತ್ತಿರಬೇಕು. ಈ ಮಾಹಿತಿ ಎಲ್ಲ ರೈತರಿಗೂ ತಲುಪುವಂತಿರಬೇಕು. ಬೆಲೆ ಹಾಗೂ ಬೇಡಿಕೆಯನ್ನು ಮನದಲ್ಲಿ ಇಟ್ಟುಕೊಂಡು ಆನ್‌ಲೈನ್ ವೇದಿಕೆಯಲ್ಲಿ ಲಭ್ಯವಾಗುವ ಮಾಹಿತಿ ಆಧರಿಸಿ ರೈತರು ಯಾವ ಬೆಳೆಯನ್ನು ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕು ಎಂಬುದನ್ನು ನಿರ್ಧರಿಸಿ ಮುಂದುವರೆಯಬೇಕು. ಹೀಗೆ ವ್ಯವಸ್ಥಿತವಾಗಿ ಬೆಳೆ ಬೆಳೆದಲ್ಲಿ ಬೇಡಿಕೆಗೆ ತಕ್ಕಂತೆ ಕೃಷಿ ಉತ್ಪನ್ನಗಳು ಮಾರುಕಟ್ಟೆ ತಲುಪುತ್ತವೆ. ಇದು ರೈತರು ನಷ್ಟಗೊಳ್ಳದೇ ಉತ್ತಮ ಆದಾಯಗಳಿಸಲು ಸಹಕಾರಿ. ವ್ಯವಸ್ಥಿತ ಕೃಷಿ ಮಾಡಲು ಅನುವಾಗುವಂತಹ ಕೃಷಿ ತಂತ್ರಜ್ಞಾನ ಆಧರಿತ ವ್ಯವಸ್ಥೆಯನ್ನು ಸರ್ಕಾರ ನಿರ್ಮಿಸಬೇಕು.

**–ಅರುಣ್ ಕುಮಾರ್ ಸಿ., ಯುವ ರೈತ, ಹೊಸಕೋಟೆ**

## ಕೃಷಿ ರೊಬೋಟ್‌ಗಳು

ಹಾಲು ಕರೆಯುವುದು, ಹಣ್ಣುಗಳು ಮತ್ತು ತರಕಾರಿಗಳನ್ನು ಆಯುವುದು ಮತ್ತು ಹುಲ್ಲು ಕತ್ತರಿಸುವುದು ಮುಂತಾದ ವಿವಿಧ ಕಾರ್ಯಗಳನ್ನು ನಿರ್ವಹಿಸಲು ಕೃಷಿ ರೊಬೋಟ್‌ಗಳನ್ನು ಜಾಗತಿಕವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಈ ರೊಬೋಟ್‌ಗಳು ದಣಿವರಿಯದೆ ದೀರ್ಘಕಾಲದವರೆಗೆ ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿವೆ. ಇಂತಹ ರೊಬೋಟ್‌ಗಳನ್ನು ಇಸ್ರೇಲ್ ಸೇರಿದಂತೆ ಪ್ರಮುಖ ದೇಶಗಳಲ್ಲಿ ಕಾಣಬಹುದು. ದೇಶದಲ್ಲಿ ಇಂತಹ ರೊಬೋಟ್‌ಗಳನ್ನು ಕೃಷಿ ಜಮೀನುಗಳಲ್ಲಿ ಹೆಚ್ಚಾಗಿ ಕಾಣದಿದ್ದರೂ, ಅಲ್ಲೊಂದು ಇಲ್ಲೊಂದು ಕಾಣಬಹುದು. ಇವು ಕೃಷಿ ಕಾರ್ಮಿಕರಿಗಿಂತಲೂ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು.



## ಬೆರಳ ತುದಿಗೆ ಕೃಷಿ ನಿರ್ವಹಣೆ

ಕೃಷಿ ನಿರ್ವಹಣೆಯನ್ನು ಬೆರಳ ತುದಿಗೆ ತರಲು ಸಾಧ್ಯವೇ ಎನ್ನುವ ಪ್ರಶ್ನೆ ಮೂಡುತ್ತದೆ. ಸಾಧ್ಯ ಎನ್ನುವಂತಿದೆ ಬಳಕೆಯಲ್ಲಿರುವ ಹಲವು ರೀತಿಯ ತಂತ್ರಜ್ಞಾನಗಳು. ಮೋಟರ್ ಪಂಪ್‌ಗಳ ನಿಯಂತ್ರಣ, ನೀರಾವರಿ ವ್ಯವಸ್ಥೆಯನ್ನು ಇಂದು ಬೆರಳ ತುದಿಯಲ್ಲೇ ನಿರ್ವಹಿಸಬಹುದು. ಮೋಟರ್ ಪಂಪ್‌ಗಳನ್ನು ಆನ್ ಮತ್ತು ಆಫ್ ಮಾಡುವ ಸ್ಟಾರ್ಟರ್‌ಗಳು ಹಾಗೂ ಬೆಳೆಗಳಿಗೆ ಅಗತ್ಯಕ್ಕೆ ತಕ್ಕಂತೆ ತಾನಾಗಿಯೇ ನೀರಿನ ನಿರ್ವಹಣೆ ಮಾಡಿಕೊಳ್ಳುವ ವಾಟರ್ ಮ್ಯಾನೇಜ್‌ಮೆಂಟ್ ಸಿಸ್ಟಂ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿದೆ. ನೀರಾವರಿ ಪಂಪ್‌ಸೆಟ್ ನಿರ್ವಹಣೆ ವ್ಯವಸ್ಥೆ ರೈತರಿಗೆ ದುಬಾರಿ ಅನಿಸಿದರೂ ದೀರ್ಘಕಾಲದಲ್ಲಿ ಕೃಷಿ ನಿರ್ವಹಣೆಯನ್ನು ಸುಲಭ, ಸರಳಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ■

## ನೀಗಿಸಬೇಕಿದೆ ಮಾಹಿತಿ ಕೊರತೆ

ದೇಶದ ಬಹುತೇಕ ಕೃಷಿಕರು ಅವಿದ್ಯಾವಂತರು. ಇವರಿಗೆ ಆಧುನಿಕ ಕೃಷಿ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಇದು ಕೃಷಿಯನ್ನು ತಂತ್ರಜ್ಞಾನ ಆಧರಿತವಾಗಿಸುವ ನಿಟ್ಟಿನಲ್ಲಿ ಬಹುದೊಡ್ಡ ಹಿನ್ನಡೆಯಾಗುತ್ತಿದೆ. ಕೃಷಿಯಲ್ಲಿ ತೊಡಗಿರುವ ವಿದ್ಯಾವಂತ ಯುವ ಸಮುದಾಯವಷ್ಟೇ ತಂತ್ರಜ್ಞಾನ ಆಧರಿತ ಕೃಷಿಯ ಪ್ರಾಮುಖ್ಯತೆಯನ್ನು ಅರಿತಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಉಸಿರಾಗಿಸಿಕೊಂಡಿರುವ ಕೋಟ್ಯಂತರ ರೈತರ ಮುಂದೆ ತಂತ್ರಜ್ಞಾನದ ಮಾತು ಎತ್ತಿದರೆ, ಸಿಡುಕಾಡುತ್ತಾರೆ. ಅವರಿಗಿರುವ ಮಾಹಿತಿ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಯುವ ಕೃಷಿಕರು ಹಾಗೂ ಸರ್ಕಾರಗಳು ಅರಿವಿನ ಜಾಗೃತಿಯನ್ನು ಮೂಡಿಸುವುದು ಅತ್ಯಗತ್ಯ.